ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 14ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, "2004ನೇ ಸಾಲಿನ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"2004ನೇ ಸಾಲಿನ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

10. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಸೌಹಾರ್ದ ಸಹಕಾರಿ ಕಾನೂನಿಗೆ ಸಂಬಂಧಪಟ್ಟಂತೆ.

ಅಧ್ಯಕ್ಷರು : ಈಗ ನಮ್ಮ ಮುಂದೆ ಇನ್ನೂ 6 ಬಿಲ್ಸ್ ಇವೆ.

ಶ್ರೀ ಹೆಚ್. ವಿಶ್ವನಾಥ್ : ನಮ್ಮ ಸಹಕಾರಿ ಮಸೂದೆಯನ್ನು ಅಂಗೀಕರಿಸಬಹುದಾಗಿದೆ. ಅದು ಅಂತಹ ಸೀರಿಯಸ್ಸಾದ ತಿದ್ದುಪಡಿ ಏನಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು, ಮಾನ್ಯ ಸಚಿವರು ಆಗ ಸದನದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಶ್ರೀಮತಿ ಸೋನಿಯಾ ಗಾಂಧಿಯವರ ಪತ್ರಕ್ಕೆ ಬಹಳ ಮಹತ್ವ ಕೊಡುತ್ತೇನೆ, ಅದರಲ್ಲಿ ಏನಿದ್ದರೂ ಅದರಂತೆ ನಡೆಯುತ್ತೇನೆ ಎಂದು ಅವರು ಹೇಳಿದ್ದಾರೆ. ನೀವು ಈ ವಿಧೇಯಕವನ್ನು ಇಲ್ಲಿ ಪರ್ಯಾಲೋಚಿಸಿರಿ. ಆಗ ಇದು ಶ್ರೀಮತಿ ಸೋನಿಯಾ ಗಾಂಧಿಯವರ ವಿಚಾರಕ್ಕೆ ವಿರುದ್ಧವಾಗಿಯೋ ಇಲ್ಲವೋ ಎಂಬುದು ನಿಮಗೇ ಗೊತ್ತಾಗುತ್ತದೆ. ಅವರ ಪತ್ರದ ಆಶಯದಂತೆಯೇ ಇದೆ ಎನ್ನುವುದಾದರೆ, ನಾವು ಈ ವಿಧೇಯಕಕ್ಕೆ `yes' ಎನ್ನುತ್ತೇವೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಸೌಹಾರ್ದ ಸಹಕಾರಿ ಕಾನೂನಿಗೆ ಗೌರವಾನ್ವಿತ ರಾಷ್ಟ್ರಪತಿಗಳು ತಮ್ಮ ಅಂಕಿತ ಹಾಕುವ ಮುನ್ನ ಕೆಲವು ಷರತ್ತುಗಳನ್ನು ವಿಧಿಸಿದರು. ಆ ಷರತ್ತುಗಳ ಆಧಾರದ ಮೇಲೆ Reserve Bank of India ಮತ್ತು ಭಾರತ ಸರ್ಕಾರ ಕೊಟ್ಟಂತಹ ಸಲಹೆಗಳ ಮೇರೆಗೆ ಈ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ. ಆ ತಿದ್ದುಪಡಿಯಲ್ಲೂ ಕೂಡ ಕೆಲವೊಂದು excess ಆಗಿವೆ ಎನ್ನತಕ್ಕಂಥ ಅಭಿಪ್ರಾಯ ಮೇಲ್ಮನೆಯಲ್ಲಿ ಈ ಮಸೂದೆ ಚರ್ಚೆಗೆ ಬಂದಾಗ ವ್ಯಕ್ತವಾಗಿದ್ದರಿಂದ, ಹಿರಿಯ ಸಹಕಾರಿ ಸದಸ್ಯರೊಡನೆ ಕುಳಿತು ಚರ್ಚಿಸಿ ಕೆಲವೊಂದನ್ನು ನಾವು ವಾಪಸ್

ಂಡು ಅಲ್ಲಿ ವಿಧೇಯಕಕ್ಕೆ ಅಂಗೀಕಾರ ದೊರಕಿಸಿಕೊಂಡಿದ್ದೇವೆ. ಆದ್ದರಿಂದ ತಾವೂ ಕೂಡ ಇದನ್ನು ಅಂಗೀಕರಿಸಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಆದರೆ ನಾನೇನು ಹೇಳುತ್ತೇನೆ ಎಂದರೆ, ಅಲ್ಲಿ ಕೆಲವೊಂದು ತಿದ್ದುಪಡಿಗಳನ್ನು ತೆಗೆದಿರುವುದರ ಜೊತೆಗೆ, ಇದರಲ್ಲಿ ಇನ್ನೂ ಬಹಳಷ್ಟು ತಿದ್ದುಪಡಿಗಳು ತೆಗೆಯುವಂತಾದ್ದು ಇವೆ. ಆ ಬಿಲ್ಲಿನ ಮೂಲ ಉದ್ದೇಶವೇ ಹಾಳಾಗಿ ಹೋಗುವಂತಹ ತಿದ್ದುಪಡಿಗಳು ಇದರಲ್ಲಿ ಇವೆ. ಅಧಿಕಾರಿಗಳಿಗೆ ಎಲ್ಲಾ ರೀತಿಯಾದಂತಹ ಅಧಿಕಾರ ಕೊಡುವಂತಹ ವ್ಯವಸ್ಥೆಯನ್ನು ಅದರಲ್ಲಿ ಮಾಡಿದ್ದೀರಿ. ಎಲ್ಲಾ ರೀತಿಯಾದಂತಹ ಅಧಿಕಾರ ರಿಜಿಸ್ಟ್ರಾರ್‌ರವರಿಗೇ ಕೊಡುವಂತಹ ರೀತಿಯಲ್ಲಿ ತಿದ್ದುಪಡಿಗಳು ಇವೆ. ಸರ್ಕಾರದ ಅಧಿಕಾರವೇನೂ ಇದರಲ್ಲಿ ಇಲ್ಲ. ಸೌಹಾರ್ದದ ಮೂಲ ಉದ್ದೇಶವೇ ಇದರಲ್ಲಿ ಈಡೇರುವುದಿಲ್ಲ.

ಶ್ರೀ ಹೆಚ್. ವಿಶ್ವನಾಥ್ : ಗೌರವಾನ್ವಿತ ರಾಷ್ಟ್ರಪತಿಗಳು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ಕಾರಣ ಏನೆಂದರೆ, ಈ ದೇಶದಲ್ಲಿ ಹಲವಾರು ಅರ್ಬನ್ ಬ್ಯಾಂಕ್‌ಗಳು.....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಸಚಿವರೇ, ಈಗ ವಿಧೇಯಕದ ಬಗ್ಗೆ ಚರ್ಚೆ ಬೇಡ....

ಗೊಂದಲ

ಶ್ರೀ ಎಸ್.ಎ. ಪಾಟೀಲ್ : ವಿಧೇಯಕದ ಮೂಲ concept ಏನಿತ್ತೋ ಅದೇ ಈ ತಿದ್ದುಪಡಿಗಳಿಂದ ಹೊರಟು ಹೋಗುವಂತಿದೆ.

ಅಧ್ಯಕ್ಷರು : ಒಂದು ನಿಮಿಷ, Financial bills ಎಲ್ಲಾ ಇವತ್ತು ಮುಗಿದಿವೆ. ಇನ್ನೂ ಮುಖ್ಯವಾದ 4–5 ಬಿಲ್ ಇವೆ. ಆದ್ದರಿಂದ ನಾಳೆ two hours ಏಕೆ ನಾವು ಕುಳಿತುಕೊಳ್ಳಬಾರದು? 4–5 ಬಿಲ್‌ಗಳನ್ನು ಅಂಗೀಕಾರ ಮಾಡಿಕೊಂಡು, ನಂತರ thanks giving ಮಾಡಿಕೊಂಡು by one `O' Clock we can finish it. ಏನಪ್ಪಾ ನಾಳೆ ನೀವೆಲ್ಲಾ ಬರುತ್ತೀರಾ?

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ತಮ್ಮ ಈ ಆಹ್ವಾನ ಪರ್ಮನೆಂಟಾಗಿ ಇದ್ದರೆ, ಎಲ್ಲರೂ ಇಲ್ಲಿಗೆ ಬರುತ್ತೇವೆ.

(ಸದನದಲ್ಲಿ ನಗು)

ಅಧ್ಯಕ್ಷರು : ಆಯಿತು, ಈಗ ಸದನವನ್ನು ಮುಂದೂಡುತ್ತಿದ್ದೇನೆ. ನಾವು ಮತ್ತೆ ನಾಳೆ ಬೆಳಿಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳೋಣ.

(ಸದನವು ರಾತ್ರಿ 7.36 ಗಂಟೆಗೆ ಮುಂದೂಡಲ್ಪಟ್ಟು ಪುನ: ನಾಳೆ ಬೆಳಿಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)